**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,  ಮೈಸೂರು.</u>**

**<u>Spl.C. 78 /2019</u>**

**P.W.-9**
**C.W.-18**

ಹೆಸರು : ಜಿ ಶೇಖರ್

ತಂದೆಯ ಹೆಸರು : ಗುರುಬಸವೇಗೌಡ

ವಯಸ್ಸು : 47 ವರ್ಷ

ಉದ್ಯೋಗ : ಪೊಲೀಸ್ ಇನ್ಸ್‌ಪೆಕ್ಟರ್ , ಜಾಲಹಳ್ಳಿ ಸಂಚಾರ ಪೊಲೀಸ್ ಠಾಣೆ , ಬೆಂಗಳೂರು

ವಾಸಸ್ಥಳ : ಬೆಂಗಳೂರು

**ದಿನಾಂಕಃ 13 .08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

2. ನಾನು ಎಸಿಬಿ ಪೊಲೀಸ್ ಠಾಣೆ ಮೈಸೂರಿನಲ್ಲಿ 7 ಜನವರಿ 2018 ರಿಂದ ದಿ.11.11.2019 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ .

3. ದಿ.03.01.2019 ರಂದು ಚಾಸಾ.17 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ, ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ಸದರಿ ಪ್ರಕರಣದಲ್ಲಿ ಅದೇ ದಿನ ಧ್ವನಿಗೆ ಸಂಬಂಧಪಟ್ಟ ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯೂ ಧ್ವನಿಗೆ ಸಂಬಂಧಪಟ್ಟ ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.44 ಎಂದು ಗುರುತಿಸಲಾಯಿತು.

4. ದಿ.05.01.2019 ರಂದು ಆರೋಪಿ ಪರ ಅಭಿಯೋಜನಾ ಮಂಜೂರಾತಿ ಯನ್ನು ಪೊಲೀಸ್ ಅಧೀಕ್ಷಕರು ಕೇಂದ್ರ ಸ್ತಾನ ರಾಮ್ ನಿವಾಸ್ ಸೆಪಟ್ ರವರು ಕಳುಹಿಸಿಕೊಟ್ಟಿದ್ದನ್ನು ಮಾನ್ಯ ಪೊಲೀಸ್ ಅಧೀಕ್ಷಕರು , ದಕ್ಷಿಣ ವಲಯ , ಎಸಿಬಿ ಮೈಸೂರು ರವರು ಅದನ್ನು ನಮಗೆ ವರ್ಗಾಯಿಸಿದ ಮೇರೆಗೆ ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಪೊಲೀಸ್ ಅಧೀಕ್ಷಕರು ಕೇಂದ್ರ ಸ್ತಾನ ರಾಮ್ ನಿವಾಸ್ ಸೆಪಟ್ ರವರು ನೀಡಿದ ಜ್ಞಾಪವನವನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.45 (ಪುಟ 16) ಎಂದು ಗುರುತಿಸಲಾಯಿತು. ನಂತರ ದಿ. 05.01.2019 ಪೋಲೀಸ್ ಅಧೀಕ್ಷಕರು, ಅಭಿಯೋಜನಾ ಮಂಜೂರಾತಿ ಆದೇಶಕ್ಕೆ ಸಂಬಂಧಪಟ್ಟ ನೀಡಿದ ಜ್ಞಾಪನವನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.46 (ಪುಟ 15) ಎಂದು ಗುರುತಿಸಲಾಯಿತು. ಸಾಕ್ಷಿಯೂ ಮಂಜೂರಾತಿ ಆದೇಶವನ್ನು ನೋಡಿ ಗುರುತಿಸಿದ್ದು , ಸದರಿ ದಾಖಲೆಯನ್ನು ಈಗಾಗಲೇ ನಿಪಿ.21 ಎಂದು ಗುರುತಿಸಲಾಯಿತು.

5. ನಂತರ ತನಿಖೆಯನ್ನು ಪೂರೈಸಿ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

6. ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಪುಟ 167 ಅರ್ಜಿಯಲ್ಲಿ ಅರ್ಜಿದಾರರ ಸಹಿ ಎಸ್ ಆರ್ ತೆರೆಸಾ ಬಿ ಎಂದು ಇದ್ದು , ಪುಟ 25 ರಲ್ಲಿ ಸಾಮಾನ್ಯ ಅಧಿಕಾರ ಪತ್ರದಲ್ಲಿ ಬಿ ಎಂಬ ಅಕ್ಷರ ಕಾಣುತ್ತಿಲ್ಲ ಎಂದರೆ ಸರಿ. ಈ ವಿಚಾರಕ್ಕೆ ಸಂಬಂಪಟ್ಟಂತೆ ತೆರೆಸಾ ರವರನ್ನು ಕರೆಸಿ ಎರಡೂ ಸಹಿಗಳಲ್ಲಿ ಯಾವುದು ಸರಿ ಎಂದು ವಿಚಾರಿಸಿರುತ್ತೀರಿಯೆ

ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಸರಿಯಾಗಿ ಪರಿಶೀಲನೆ ಮಾಡದೇ ಮೇಲಾಧಿಕಾರಿಗಳ ಒತ್ತಡದ ಮೇರೆಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮೈಸೂರು.